ISSN: 2582-2284

ಸಂಪುಟ 1 ಸಂಚಿಕೆ 2 ಸೆಪ್ಟೆಂಬರ್ – ಅಕ್ಟೋಬರ್ 2019

# ಪ್ರತಿಬಿಂಬ

## MULTIDISCIPLINARY KANNADA RESEARCH JOURNAL OF IIMRD

Peer Reviewed and Referred Kannada

IIMRD
JOURNALS

ಭಾರತೀಯ ಬಹುಶಿಸ್ತೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ
ಮೈಸೂರು

## ಅನುಕ್ರಮಣಿಕೆ


| | ಅನುಕ್ರಮಣಿಕೆ | ಪು.ಸಂ |
|---|---|---|
| 1. | ಆದಿವಾಸಿ ಸಮುದಾಯಗಳ ಅಭಿವೃದ್ಧಿಯಲ್ಲಿ ಅರಣ್ಯದ ಪಾತ್ರ: ಒಂದು ವಿಶ್ಲೇಷಣೆ – ಡಾ.ಎಲ್.ಶ್ರೀನಿವಾಸ – ಶಿವರಾಜ ಎಸ್ | 1 |
| 2. | ಕನ್ನಡ ಭಾಷೆ ಮತ್ತು ಶಿಕ್ಷಣ ಮಾಧ್ಯಮ : ವರ್ತಮಾನದ ಆತಂಕಗಳು – ಲೋಹಿತ್.ಪಿ | 12 |
| 3. | ಬೆಂಗಳೂರು ನಗರದ ಕಥಾ ಕೀರ್ತನಕಾರರು : ಒಂದು ಅಧ್ಯಯನ – ಸುಧಾಎಲ್ | 19 |
| 4. | ಹೊಸದುರ್ಗ ತಾಲೂಕಿನ ಮತ್ತೋಡು ಪಾಳೇಗಾರರು: ಒಂದು ಅಧ್ಯಯನ – ದಿನೇಶ್ ಕುಮಾರ್ ಪಿ.ಎನ್ | 26 |
| 5. | ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳು – ಡಾ.ಕುಮಾರ ಎಸ್.ಕೆ | 32 |
| 6. | ಸುಡುಗಾಡು ಸಿದ್ಧ ಸಮುದಾಯದ ನಂಬಿಕೆ ಮತ್ತು ಆಚರಣೆಗಳು – ಡಾ. ಎಚ್.ಮಂಜು | 44 |
| 7. | ಪರಿಸರ ಸಂರಕ್ಷಣೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಮಹತ್ವ : ಒಂದು ಅವಲೋಕನ – ಸೌಮ್ಯ ಕೆ – ಪ್ರೊ. ಡಾ. ಸಿ.ಬಸವರಾಜು | 55 |
| 8. | ಶಾಸನಗಳ ಹಿನ್ನೆಲೆಯಲ್ಲಿ ಕೊಳ್ಳೇಗಾಲ ಪ್ರದೇಶದ ಆರ್ಥಿಕ ಪರಿಸ್ಥಿತಿ – ಡಾ. ಮೋಹನ ಹೆಚ್.ಎಂ | 64 |
| 9. | ಬುಡಕಟ್ಟು ಅಭಿವೃದ್ಧಿಯಲ್ಲಿ ಸಿಸಿಡಿ ಯೋಜನೆಯ ಪಾತ್ರ : ಒಂದು ವಿಶ್ಲೇಷಣೆ – ಮಧುಸೂದನ ಎ.ಪಿ. – ಡಾ.ಬಿ.ಆರ್.ವಿಜಯೇಂದ್ರ | 70 |
| 10. | ಕನ್ನಡ ಭಾಷೆ, ಸಾಹಿತ್ಯದ ಇತಿಹಾಸ ಮತ್ತು ಕರ್ನಾಟಕ ಏಕೀಕರಣ – ರಾಜೇಶ್ವರಿ ರವಿ ಸಾರಂಗಮಠ | 78 |
| 11. | ಹದಿಹರೆಯದ ಮಕ್ಕಳ ಸಮಸ್ಯೆಗಳು, ಸವಾಲುಗಳು ಮತ್ತು ಪರಿಹಾರ: ಒಂದು ವಿಶ್ಲೇಷಣೆ –ವಾಣಿ.ವೈ.ಡಿ. | 88 |
| 12. | ಒಡಿಗ ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಆಚರಣೆಗಳು: ಒಂದು ಅಧ್ಯಯನ – ಅನಿತ ಟಿ | 97 |
| 13. | ವಿಮರ್ಶಕ ಮತ್ತು ವಿಮರ್ಶೆಯ ಸ್ವರೂಪ : ಒಂದು ವಿಶ್ಲೇಷಣೆ – ಡಾ.ಯಲ್ಲಮ್ಮ.ಕೆ | 107 |
| 14. | ಕಾವ್ಯದ ಜೀವಾಳ: ರೀತಿ–ಮಾರ್ಗ – ಡಾ. ಎಸ್.ಬಿ. ರಾಠೋಡ | 114 |

ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-1 Issue 2, Sep-Oct 2019
©IIMRD, Mysuru
IIMRD JOURNALS
www.iimrd.com

# ಕಾವ್ಯದ ಜೀವಾಳ: ರೀತಿ–ಮಾರ್ಗ

ಡಾ. ಎಸ್.ಬಿ. ರಾಠೋಡ [1]

**ಪೀಠಿಕೆ**

ಮೀಮಾಂಸಕರು ಕಾವ್ಯವನ್ನು ಒಬ್ಬ ವ್ಯಕ್ತಿಯೆಂದು ಪರಿಭಾವಿಸಿಕೊಂಡದ್ದರಿಂದ, ವ್ಯಕ್ತಿಗೆ ಅವಶ್ಯಕವಾಗಿ ಬೇಕಾಗಿರುವ ಎಲ್ಲ ಅಂಶಗಳನ್ನು 'ಕಾವ್ಯ'ವನ್ನು ವ್ಯಕ್ತಿಗೆ ಅನ್ವಯಗೊಳಿಸಿ ವಿವೇಚನೆ ಮಾಡಿದ್ದಾರೆ. ರೀತಿ ಅಂದರೆ ಒಬ್ಬ ವ್ಯಕ್ತಿಯ ನಡವಳಿಕೆಗೆ ಹೋಲಿಸಬಹುದು. ಅವನ ನಡೆ, ನುಡಿ ಚೆನ್ನಾಗಿಲ್ಲದಿದ್ದರೆ, ಅವನ ರೀತಿ ಸರಿಯಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ವ್ಯಕ್ತಿಯ ಒಳ–ಹೊರ ನೋಟ ನೋಡುಗರಿಗೆ ಮುದವನ್ನುಂಟು ಮಾಡಬೇಕು. ಇಲ್ಲದಿದ್ದರೆ ಅವನ ವರ್ತನೆಯು ಅಸಹ್ಯವಾಗಿ ತೋರುತ್ತದೆ. ಈ ಮಾತುಗಳನ್ನು ಕಾವ್ಯ ರಚನೆ ಮಾಡುವಾಗ ಖಡಾಖಂಡಿತವಾಗಿ ಬಳಕೆ ಮಾಡಿಕೊಳ್ಳಬೇಕು.

ರೀತಿ–ಮಾರ್ಗ, ಅಥವಾ ಚಿಂತಕರ ಚಿಂತನೆ ಎಂದರೆ ಕಾವ್ಯದ ಬರವಣಿಗೆಯ ಕ್ರಮ. ಈ ಬರವಣಿಗೆ ಕವಿ ಬಳಸುವ ಭಾಷೆಯಿಂದ ರೂಪಗೊಳ್ಳುವ ಪದಸರಣಿಯಾಗಿದೆ. ಈ ಪದಗಳ ಜೋಡಣೆ ಕವಿಯಿಂದ ಕವಿಗೆ ಬೇರೆಯಾಗಿರುತ್ತದೆ. ನಾವು ಕಾವ್ಯಕ್ಕೊಂದು ನಡೆಯಿದೆ ಎಂದು ಅರಿತುಕೊಂಡಾಗ, ಅದು ನಡೆದದ್ದು ಮಾರ್ಗವಾಗತ್ತದೆ. ಆ ಮಾರ್ಗವು ಕವಿಯ ಅಂತಃಸತ್ವ ಅಭಿವ್ಯಕ್ತಿಯ ಸಂಕೇತವಾಗುತ್ತದೆ. ಆದುದರಿಂದಲೇ ರೀತಿಯು "ಮಾರ್ಗ"ವಾಗಿದೆ, ಮಾರ್ಗವು "ಶೈಲಿ"ಯಾಗಿದೆ. ಇವು ಒಂದಕ್ಕೊಂದು ತಳಕು ಹಾಕಿಕೊಂಡ ಅಂಶಗಳಾಗಿ ಭಾರತೀಯ ಕಾವ್ಯಮೀಮಾಂಸೆಯಲ್ಲಿ ನಿರೂಪಿಸಲ್ಪಟ್ಟಿವೆ.

ಕವಿಯಾದವನು ಕಾವ್ಯವನ್ನು ರಚಿಸುವಾಗ ಅತಿ ಸಾಮಾನ್ಯವಾಗಿರುವ ಭಾಷೆಯನ್ನು "ಅತಿಶಯದ ಭಾಷೆ"ಯನ್ನಾಗಿ ಬಳಿಕೆ ಮಾಡಿಕೊಳ್ಳುತ್ತಾನೆ. ಇಂತಹ ನಿರ್ಮಾಣದಲ್ಲಿಯೇ ಅಲಂಕಾರ–ಗುಣ ರೀತಿಗಳೆಲ್ಲ ಕಾಣತ್ತೇವೆ. ಕವಿಯು ಭಾಷೆಯನ್ನು ತನ್ನ ಉದ್ದೇಶಕ್ಕೆ ಅನುಗುಣವಾಗಿ ಪುನರ್ ಸಿದ್ದವಾಗಿಸಿಕೊಳ್ಳುತ್ತಾನೆ. ಆದುದರಿಂದ ರೀತಿಯೆಂದರೆ ಕವಿಯು ತನ್ನ ಮನೋಧರ್ಮಕ್ಕೆ

[1] *ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ – 586205.*